ಒಂದಿಷ್ಟು ದೂರ ಚಕ್ರವಿಲ್ಲದೆ ಪಲ್ಟಿಯಾಗಿಯೇ ನಮ್ಮನ್ನೆಳೆದುಕೊಂಡು ತ್ರಾವಹ ಚಲಿಸಿದ್ದ. ಹುಡುಗು ಬುದ್ಧಿಯ ನನಗೆ ಏನಾಗುತ್ತಿದೆ ಎಂಬುದೇ ಗೊತ್ತಾಗಲಿಲ್ಲ. ಬಾಪ ಮಾತ್ರ 'ಯಾರಬ್ಬೆ' ಎಂದು ಅಲ್ಲಾನನ್ನು ಜೋರಾಗಿ ಕೂಗಿದ್ದರು. ಬಂದ್ ಇದ್ದುದ್ದರಿಂದ ಆ ನಿರ್ಜನ ರಸ್ತೆಯಲ್ಲಿ ಅರ್ಧ ಗಂಟೆಯಾದರೂ ಒಂದು ನರಪಿಳ್ಳೆಯ ಸುಳಿವಿರಲಿಲ್ಲ. ಅರ್ಧ ಗಂಟೆ ನಂತರ ಯಾರೋ ಮಹಾನುಭಾವ ತ್ರಾವಹನ ಒಳಗೆ ಸಿಕ್ಕಿಹಾಕಿಕೊಂಡಿದ್ದ ನಮ್ಮನ್ನು ಬಿಡಿಸಿ ಆಸ್ಪತ್ರೆಗೆ ದಾಖಲಿಸಿದ್ದ. ನನ್ನ ಎಡಗಾಲಿನ ಮೇಲೆ ತ್ರಾವಹನ ದೇಹ ಬಿದ್ದ ಕಾರಣ ಎಡಗಾಲು, ಎಡಗೈ ತೀವ್ರವಾಗಿ ನಜ್ಜುಗುಜ್ಜಾಗಿತ್ತು. ಎಡಕಿವಿಯ ಅರ್ಧಭಾಗ ಕತ್ತರಿಸಲ್ಪಟ್ಟು ನೇತಾಡುತ್ತಿತ್ತು. ಅದನ್ನು ಹಾಗೇ ಹೊಲಿದು ಜೋಡಿಸುವ ಕೆಲಸವನ್ನು ನಮ್ಮೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾಕ್ಟರ್ ಮಾಡಿದ್ದರು. ಬಾಪನಿಗೆ ಅಲ್ಲಲ್ಲಿ ತರಚಿದ್ದು ಬಿಟ್ಟರೆ ಬೇರೇನೂ ಆಗಿರಲಿಲ್ಲ.

ತ್ರಾವಹನ ಮುಂಭಾಗ ಜಖಂ ಆಗಿತ್ತು. ಚಾವಣಿ ರಸ್ತೆಯ ಜೊತೆಗೆ ಸಂಘರ್ಷಕ್ಕಿಳಿದು ಹರಿದ ಗಾಳಿಪಟದಂತಾಗಿತ್ತು. ನನಗಂತೂ ದಯನೀಯ ಸ್ಥಿತಿಗೆ ತಲುಪಿದ ತ್ರಾವಹನ ಕಂಡು ಮತ್ತಷ್ಟು ಅಳು ಒತ್ತರಿಸಿ ಬಂತು. ಒಂದೇ ಒಂದು ಮಾತು ಬೈಯದೆ, ಪ್ರೀತಿಯಿಂದ ಸಂತೈಸಿ ತಿಂಗಳಾನುಗಟ್ಟಲೆ ಹಾರೈಕೆ ಮಾಡಿದ ಬಾಪ ಸಾವಿರಾರು ರೂಪಾಯಿ ಕೊಟ್ಟು ನಮ್ಮ ತ್ರಾವಹನನ್ನೂ ನನ್ನನ್ನೂ ಮೊದಲಿನ ಸ್ಥಿತಿಗೆ ತರುವಲ್ಲಿ ಯಶಸ್ವಿಯಾದ. ಇಡೀ ಅಪಘಾತದಿಂದ ನನಗಾದ ಒಂದೇ ಒಂದು ಲಾಭವೆಂದರೆ ಒಂದು ತಿಂಗಳು ಶಾಲೆಗೆ ಹೋಗದೆ ಇದ್ದದ್ದು ಮಾತ್ರ. ಉಳಿದದ್ದೆಲ್ಲವೂ ನಷ್ಟದ ಪಟ್ಟಿಗೆ ಸೇರುತ್ತದೆ. ಮತ್ತೆಂದೂ ತ್ರಾವಹನನ್ನು ಚಲಾಯಿಸುವ ಸಾಹಸಕ್ಕೆ ನಾನಂತೂ ಕೈ ಹಾಕಲೇ ಇಲ್ಲ.

ನಮ್ಮೂರಿನ ಪಂಚಾಯಿತಿಯ ಗ್ರಾಮಸಭೆಗೆ ಜನರು ಸೇರಲು, ಜನಸಂಪರ್ಕ ಸಭೆಗಳ ಕುರಿತು ಜನರಿಗೆ ತಿಳಿಸಲು ಅನೌನ್ಸ್‌ಮೆಂಟ್ (ಡಂಗೂರ ಸಾರುವ) ಮಾಡುವ ಕ್ರಮವೊಂದು. ಕನ್ನಡ ಸ್ಪಷ್ಟವಾಗಿ ಓದುತ್ತಿದ್ದ ನನಗೆ ಈ ಕೆಲಸ ವಹಿಸಲಾಗುತ್ತಿತ್ತು. ಎರಡು ಮೂರು ತಾಸಿನ ಈ ಕೆಲಸಕ್ಕೆ ಇನ್ನೂರು ಮುನ್ನೂರು ಸಂಬಳ ಖಚಿತ. ಮೈಕ್ ಸೆಟ್ ಅನ್ನು ತ್ರಾವಹನ ಮೇಲೆ ಕಟ್ಟಿ ಹಿಂದೆ ಕುಳಿತು ಜೋರಾಗಿ ಪ್ರಚಾರ ಮಾಡುವಾಗ ಆರಂಭದಲ್ಲಿ ಸಂಕೋಚವಾದರೂ ಮುಂದೆ ಬಾಪ, ನಾನು ಮತ್ತು ತ್ರಾವಹನ ಜುಗಲ್‌ಬಂದಿ ಪ್ರಚಾರ ಯೋಜನೆಗಳನ್ನು ಯಶಸ್ವಿಗೊಳಿಸುತ್ತಿತ್ತು. ಬಾಪನಿಗೂ ಪ್ರಚಾರಕ್ಕೆ ಬಳಸಿದ ತ್ರಾವಹನ ಬಾಡಿಗೆ ಸಂದಾಯವಾಗುತ್ತಿತ್ತು.

ಇನ್ನು ಈದ್ ಮಿಲಾದ್ ಹಬ್ಬ ಬಂತೆಂದರೆ ಸಾಕು ಮಕ್ಕಳಿಗೆ ಎಲ್ಲಿಲ್ಲದ ಹುರುಪು. ಯಾಕೆಂದರೆ ಮಿಲಾದ್ ಹಬ್ಬದ ಪ್ರಯುಕ್ತ ಮದರಸಾ ವಿದ್ಯಾರ್ಥಿಗಳಿಗೆ ಪಾಟ್, ಬೈತ್, ದಫ್, ಪ್ರಭಾಷಣಗಳ ಸ್ಪರ್ಧೆ ಏರ್ಪಡಿಸಲಾಗುತ್ತದೆ. ಅದರ ಜೊತೆಗೆ ಸುಬಹಿ ನಮಾಜಿನ ನಂತರ ಮೌಲಿದ್ ಪಾರಾಯಣ ಮಾಡಿ ನಮ್ಮೂರಿನ ಮುಖ್ಯ ಬೀದಿಗಳಲ್ಲಿ ಬೃಹತ್ ಜಾಥಾ, ದಫ್ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಜಾಥಾದಲ್ಲಿ ಜನರ ಗುಂಪಿನ ಜೊತೆಗೆ ಬೈಕ್‌ಗಳದ್ದು, ಆಟೊಗಳದ್ದು, ಕಾರು ಜೀಪುಗಳದ್ದೇ ಕಾರುಬಾರು. ಚಾಲಕನ ಜೊತೆಯಲ್ಲಿ ಪುಟಾಣಿ ಮಕ್ಕಳನ್ನೂ, ಹುಡುಗಿಯರನ್ನೂ ವಾಹನಗಳಲ್ಲಿ ಕೂರಿಸಿಕೊಳ್ಳಬೇಕು. ದೊಡ್ಡವರು, ಗಂಡುಮಕ್ಕಳು ನಡೆದುಕೊಂಡೇ ಜಾಥಾ ಪೂರ್ಣಗೊಳಿಸಬೇಕು.

ಇಂತಹ ಜಾಥಾಗೆ ಬರುವ ವಾಹನಗಳನ್ನು ಅದ್ದೂರಿಯಾಗಿ ಸಿಂಗರಿಸುವ ಕ್ರಮವೊಂದು ನಮ್ಮೂರಲ್ಲೂ ಚಾಲ್ತಿಯಲ್ಲಿತ್ತು. ಮುಂಜಾನೆಯೇ ವಾಹನ ತೊಳೆದು ಸ್ವಚ್ಛಗೊಳಿಸಿ ಅದಕ್ಕೆ ಬಲೂನ್, ಕಲರ್ ರಿಬ್ಬನ್, ಮಿಂಚುವ ಮಿನಿಮಿನಿ ಹಾರ, ಬಣ್ಣದ ಪೇಪರ್‌ಗಳನ್ನು ಬಳಸಿಕೊಂಡು ಅಲಂಕರಿಸಲಾಗುತ್ತಿತ್ತು. ಬಾಪನ ಸಾರಥಿ ತ್ರಾವಹನನ್ನು ಸಿಂಗರಿಸುವ ಕೆಲಸ ನನ್ನ ಪಾಲಿನದ್ದಾದರೂ, ಅವನೊಳಗೆ ಕುಳಿತು ಜಾಥಾ ಸೊಬಗನ್ನು ಕಣ್ಣು ತುಂಬಿಕೊಳ್ಳುವ ಅವಕಾಶ ಹುಡುಗನಾದ ನನ್ನ ಪಾಲಿನದ್ದಾಗಿರಲಿಲ್ಲ. ಆಗ ಅನ್ನಿಸುತ್ತಿತ್ತು ನಾನು ಹೆಣ್ಣಾಗಬೇಕಿತ್ತೆಂದು.

ಅಲಂಕೃತಗೊಂಡ ವಾಹನದೊಳಗೆ ಕುಳಿತು ಜಾಥಾದ ಉದ್ದಕ್ಕೂ ಮಕ್ಕಳು ಅನುಭವಿಸುವ ಆನಂದವನ್ನು ಹೇಳಲು ಅತೀತವಾದದ್ದು. ಜಾಥಾದಲ್ಲಿ ಸಿಂಗರಗೊಂಡ ತ್ರಾವಹ ಹೆಣ್ಣುಮಕ್ಕಳನ್ನು ಪುಟಾಣಿಗಳನ್ನು ಕೂರಿಸಿಕೊಂಡು ಠೀವಿಯಲ್ಲಿ ಚಲಿಸುವಾಗ ನನಗಂತೂ ಹೊಟ್ಟೆಕಿಚ್ಚಾಗುತ್ತದೆ. ಜಾಥಾಕೆ ಬರುವವರಿಗೆ ಧರ್ಮಾತೀತವಾಗಿ ದಾನಿಗಳು ಕೊಡುವ ಶರಬತ್ತು, ಸಿಹಿತಿನಿಸುಗಳು ಜಾಥಾದ ಮೆರುಗನ್ನು ಮತ್ತಷ್ಟು ಹೆಚ್ಚಿಸುತ್ತಿತ್ತು.

ಉಪ್ಪಾಪ, ಉಮ್ಮಾಮ, ಕಾಕ, ಅಮ್ಮಾಯಿ, ಮೂತಮ, ಮೂತ, ದಾದ, ಅಳಿಯಾಕ, ಎಳಾಮ, ಎಳಾಪ – ಹೀಗೆ ಕುಟುಂಬದ ಸರ್ವಸದಸ್ಯರು ಬಾಪನ ಹಸೈನಾರ್ ಎಂಬ ಹೆಸರನ್ನು ಸಂಕ್ಷಿಪ್ತಗೊಳಿಸಿ ಅಚ್ಚಾರು ಎಂದೇ ಕರೆಯುತ್ತಿದ್ದರು. ಇವರೆಲ್ಲಾ ತಮ್ಮ ಸಣ್ಣ ಸಣ್ಣ ವ್ಯವಹಾರಗಳಿಗೂ ತೆರಳಲು ಅಚ್ಚಾರುವಿನ ತ್ರಾವಹ ಆಟೊವನ್ನೇ ಬಳಸುತ್ತಿದರು. ಯಾರೂ ಬಿಟ್ಟಿಯಾಗಿ ಪ್ರಯಾಣ ಮಾಡುತ್ತಿರಲಿಲ್ಲ. ಸಂಬಂಧಗಳು ಬಿಗಿಯಾಗಿದ್ದರೂ ವ್ಯವಹಾರ ಸಂಬಂಧವನ್ನು ಕೆಡಿಸದಷ್ಟು ಬಾಪ ಜಾಗ್ರತೆ ವಹಿಸುತ್ತಿದ್ದರು.

ಶಾಲೆ ಬಿಟ್ಟು ನಡೆದುಕೊಂಡು ಬರುವ ಮಕ್ಕಳನ್ನು ತ್ರಾವಹ ಖಾಲಿ ಇದ್ದರೆ ಕರೆದುಕೊಂಡು ಬರುವ, ಹಿರಿಯರಿಗೆ, ಅಂಗವಿಕಲರಿಗೆ ಕಡಿಮೆ ಬಾಡಿಗೆ ತೆಗೆದುಕೊಳ್ಳುವಂತಹ ಸಣ್ಣ ಸಣ್ಣ ಅಡ್ಜೆಸ್ಟ್‌ಮೆಂಟ್‌ಗಳಿಗೆ ಬಾಪ ಸದಾ ಮುಂದಿದ್ದ. ಎಂದೂ ರಸ್ತೆಯ ಮಧ್ಯೆದಲ್ಲಿ ತ್ರಾವಹ ಕೈಕೊಟ್ಟವನಲ್ಲ.

ಸುಮಾರು ಒಂದು ದಶಕದ ಕಾಲ ತ್ರಾವಹನನ್ನು ಚಲಾಯಿಸುತ್ತಿದ್ದ ಬಾಪನಿಗೆ ಸಣ್ಣ ಪ್ರಾಯದಲ್ಲೇ ಬಾಧಿಸಿದ ಅಸ್ತಮಾ ಜೀವ ಹಿಂಡಿದ್ದಂತೂ ಸುಳ್ಳಲ್ಲ. ಊರಿನಲ್ಲೇ ಅತ್ಯುತ್ತಮವಾಗಿ ಈಜುತ್ತಿದ್ದ ಬಾಪ ತನ್ನ ಮೂವತ್ತನೇ ವಯಸ್ಸಿಗೆ ಅಸ್ತಮಾ ಕಾರಣದಿಂದಾಗಿ ತಾನು ಬಹುವಾಗಿ



ಪ್ರೀತಿಸುವ ಈಜನ್ನೇ ಕೈ ಬಿಡಬೇಕಾಯಿತು. ಆದರೆ ತಾನು ಏಳನೇ ಕ್ಲಾಸಿನಲ್ಲಿ ಕಲಿತ ಬೀಡಿ ಸೇದುವ ಚಟವನ್ನು ಸಾಯುವ ಒಂದು ವರ್ಷಕ್ಕೆ ಮೊದಲು ನಿಲ್ಲಿಸಿದ್ದ. ಚಳಿಗಾಲ ಮತ್ತು ಮಳೆಗಾಲದಲ್ಲಂತೂ ವಿಪರೀತಕ್ಕೆ ತಲುಪುತ್ತಿದ್ದ ಅಸ್ತಮಾದಂತಹ ಉಸಿರಾಟದ ಸಮಸ್ಯೆಯನ್ನಿಟ್ಟುಕೊಂಡೇ ತ್ರಾವಹನನ್ನು ಚಲಾಯಿಸುತ್ತಿದ್ದ ಬಾಪನಿಗೆ ಕೆಲವು ಬಾರಿ ಕಿಕ್ಕರ್ ಮೇಲಕ್ಕೆ ಎತ್ತಿ ಸ್ಟಾರ್ಟ್ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಬಾಪ ಬಹುವಾಗಿ ಕಷ್ಟಪಡುತ್ತಿದ್ದದ್ದನ್ನು ಕಂಡು ನಾನೇ ಕಿಕ್ಕರ್ ಎತ್ತುವ ಕಾಯಕ ಮಾಡುತ್ತಿದ್ದೆ. ನನ್ನ ಓದಿಗಾಗಿ ಮನೆಯ ನಿರ್ವಹಣೆಗಾಗಿ ಉಸಿರನ್ನು ಮೇಲೆ ಎಳೆದುಕೊಂಡೆ ಬಾಯಿಯ ಮೂಲಕ ಉಸಿರಾಡುತ್ತಾ ತ್ರಾವಹನನ್ನು ಕಷ್ಟಪಟ್ಟುಕೊಂಡು ಚಲಾಯಿಸುವ ಬಾಪ ನನ್ನ ಪಾಲಿನ ದೇವರೇ ಸರಿ.

ಕನ್ನಡ ಎಂ.ಎ. ಸ್ನಾತಕೋತ್ತರ ಪದವಿ ಫಲಿತಾಂಶ ಬಂದು ಮಂಗಳೂರಿನ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಲ್ಲಿ ಕನ್ನಡ ಅಧ್ಯಾಪಕನಾಗಿ